Mr. SPEAKER.—The question is:

"That Clauses 10 and 11 stand part of the Bill."

*The motion was adopted.*

Clauses 10 and 11 were added to the Bill.

Mr. SPEAKER.—Clause 12.

Sri A. V. NARASIMHA REDDY (Bangalore South).—I beg to move:

'In the second proviso to the clause, for the words "have been levied", the words "have already been levied" shall be substituted, and for the words "shall continue to be levied" the words "shall continue to be collected" shall be substituted.'

Mr. SPEAKER.—Amendment moved:

'In the second proviso to the clause, for the words "have been levied", the words "have already been levied" shall be substituted, and for the words "shall continue to be levied" the words "shall continue to be collected" shall be substituted.'

Sri A. V. NARASIMHA REDDY.—Sir, my amendment is merely to make the meaning of the proviso more clear. I do not think, I am required to make any elaborate statement in regard to this matter. I commend it to the acceptance of the House.

ಶ್ರೀ ಹೆಚ್. ಕೆ. ವೀರಣ್ಣಗೌಡ.—ಇದರಲ್ಲಿ "ಲೆವಿ" ಎನ್ನುವ ಶಬ್ದಕ್ಕೆ "ಕಲೆಕ್ಟೆಡ್" ಎಂದು ಮಾಡುವುದು, ಅಷ್ಟೇ. ಆದರಿಂದ ನಾನು ಇದನ್ನು ಒಪ್ಪಿಕೊಳ್ಳುತ್ತೇನೆ.

Mr. SPEAKER.—The question is:

'In the second proviso to the clause, for the words "have been levied", the words "have already been levied" shall be substituted, and for the words "shall continue to be levied" the words "shall continue to be collected" shall be substituted.'

*The motion was adopted.*

Mr. SPEAKER.—The question is:

"That Clause 12, as amended, stand part of the Bill."

*The motion was adopted.*

Clause 12 was added to the Bill.

Mr. SPEAKER.—Clause 1, Title and Preamble. The question is:

"That Clause 1, the Title and the Preamble stand part of the Bill."

*The motion was adopted.*

Clause 1, the Title and the Preamble were added to the Bill.

*Motion to pass*

Sri H. K. VEERANNA GOWDH.—I beg to move:

"That the Mysore Irrigation (Levy of Betterment Contribution and Water Rate) Bill, 1957, as reported by the Select Committee and as amended, be passed."

Mr. SPEAKER.—The question is:

"That the Mysore Irrigation (Levy of Betterment Contribution and Water Rate) Bill, 1957, as reported by the Select Committee and as amended, be passed."

*The motion was adopted.*

---

## MYSORE LOTTERIES AND PRIZE COMPETITION CONTROL AND TAX (AMENDMENT) BILL, 1957.

Sri T. MARIAPPA (Minister for Finance).—I beg to move:

"That the Mysore Lotteries and Prize Competition Control and Tax (Amendment) Bill, 1957, be taken into consideration."

Mr. SPEAKER.—Motion moved:

"That the Mysore Lotteries and Prize Competition Control and Tax (Amendment) Bill, 1957, be taken into consideration."

*Sri T. MARIAPPA.—Sir, this is a very simple measure. I hope my Hon'ble friends will not raise any cloud of dust, where there is nothing to raise such a cloud. As Hon'ble Members are aware, under the Mysore Lotteries and Prize Competitions Control Act, certain doubts were cast, after the Central Act came into existence and with regard to

(SRI T. MARIAPPA)

competitions conducted after 1st April 1956 there was a doubt whether the State could levy any tax under the Mysore Act. To set right the lacuna, this Bill is being brought. It is only a fiscal measure where certain sums are due to the State and where certain people have conducted either prize competitions or lotteries and are bound to pay a tax to the State Government. Unfortunately after 1st April 1957, the State Government was unable to take effective steps on account of the doubts cast. It is only with a view to clear that doubt that a consequential amendment was proposed. As the matter was urgent, an ordinance had to be issued and the matter is now sought to be regularised and the matter is being brought before the House. It is a simple measure, involving no complications and it does not touch the ordinary man of the land. It does not touch even the ordinary people of the land. Therefore, I beg of the House to accept this Bill.

Sri K. KENCHAPPA (Hiriyur).—In what respects does this amending Bill deviate from the original Bill?

Sri T. MARIAPPA.—There is no deviation at all. We want to make it effective from 1st April 1956. That is all.

*ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಸ್ವಾಮಿ, ಈ ದಿವಸ ಸಭೆಯ ಮುಂದೆ ಇರತಕ್ಕ ಮಸೂದೆಯು ಬಹಳ ಮಹತ್ವವಾದುದು ಎಂದು ನಾನು ತಿಳಿದುಕೊಂಡಿದ್ದೇನೆ. ಈಗಾಗಲೇ 1956ನೆಯ ಇಸವಿಯ ಫೆಬ್ರುವರಿ 23ನೆಯ ತಾರೀಖಿನ ದಿವಸ ಇಂಡಿಯಾ ಗವರ್ನಮೆಂಟಿನವರು ಜಾರಿಗೆ ಕೊಟ್ಟಿರತಕ್ಕಂಥ ಇಂಡಿಯನ್ ಆಕ್ಟ್ 1955ನ್ನು ಮೈಸೂರು ಸಂಸ್ಥಾನದಲ್ಲಿ ಜಾರಿಗೆ ತರುವ ಉದ್ದೇಶದಿಂದ ಈ ಸಭೆಯಲ್ಲಿ ಒಂದು ನಿರ್ಣಯವನ್ನು ಮಾಡಲಾಗಿತ್ತು. ಈ ನಿರ್ಣಯವನ್ನು ಮಾಡಿದಾಗ ಈ ಬಿಲ್ಲಿಗೆ ಸಂಬಂಧಪಟ್ಟ ಗೃಹ ಮಂತ್ರಿಗಳು ಆಗ ಮಾಡಿರತಕ್ಕ ಭಾಷಣವನ್ನು ಶ್ರೀ ಮರಿಯಪ್ಪನವರಾದರೂ ತಿಳಿದು ಕೊಂಡಿದ್ದಾರೆ ಎಂದು ನಂಬಿದ್ದೇನೆ. ಆ ಚರಿತ್ರೆಯನ್ನು ಸಭೆಯ ಮುಂದೆ ಹೆಚ್ಚಾಗಿ ಇಡದೆ ಈ ಬಿಲ್ಲಿಗೆ ಸಂಬಂಧಪಟ್ಟ ದ್ದನ್ನು ಮಾತ್ರ ಹೇಳುವುದಕ್ಕೆ ಪ್ರಯತ್ನಪಡುತ್ತೇನೆ. ಈಗಾಗಲೇ ಒಂದು ಆರ್ಡಿನೆನ್ಸನ್ನು ಹೊರಡಿಸಿದ್ದಾರೆ. ಅದನ್ನು ರೆಗ್ಯುಲರೈಜ್ ಮಾಡುವ ಉದ್ದೇಶ ಈ ಬಿಲ್ಲಿನಲ್ಲಿ ಇದೆ. ಆರ್ಡಿನೆನ್ಸನ್ನು ಹೊರಡಿಸುವುದು ಅಗತ್ಯವಾಗಿತ್ತು ಎಂದು ತಿಳಿಸಿದ್ದಾರೆ. ಆರ್ಡಿನನ್ಸಿನ ಪ್ರತಿಯನ್ನು ಹತ್ತಿರ ಇಸ. ಆದರೆ ಈ ಬಿಲ್ಲಿನಲ್ಲಿ ಕೆಲವು ಮಾರ್ಪಾಟು ಮಾಡಲಾಗಿದೆ. ಈ ಬಿಲ್ಲಿನಲ್ಲಿಯ ಸೆಕ್ಷನ್ ಎಂಟು ಮತ್ತು ಒಂಬತ್ತು ತೆಗೆದುಹಾಕಬೇಕು. ಸೆಕ್ಷನ್ ಆರು ಹೊಸದಾಗಿ ಬಂದು ಸೇರಿದೆ. ಇಂಡಿಯಾ ಸರಕಾರದ 1955ನೆಯ ಇಸವಿಯ ಆಕ್ಟನ್ನು ಮೈಸೂರು ಸಂಸ್ಥಾನದಲ್ಲಿ ಸರಿಯಾಗಿ ಜಾರಿಗೆ ತರುವ ಉದ್ದೇಶ ಇದೆ ಎಂದು ತಿಳಿಸಲಾಗಿದೆ. ಆದರೆ ಇದು ಎಷ್ಟರಮಟ್ಟಿಗೆ ಸಾಧ್ಯವಾಗುವುದು ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಮೂಲ ಕಾನೂನಿನಲ್ಲಿರುವ ಎಂಟು ಮತ್ತು ಒಂಬತ್ತು ಸೆಕ್ಷೆನ್‌ಗಳನ್ನು ಬಿಟ್ಟುಬಡಬೇಕು. ಅವು ಈ ರೀತಿ ಇವೆ.—

> 8. "*Licensed prize competitions not unlawful.*—A prize competition shall not be deemed to be an unlawful prize competition, if a licence in respect of such competition has been obtained by the promoter thereof.
>
> 9. *Penalty for contravention of section* 8.—Without prejudice to his liability, if any, to be proceeded against under the preceding provisions of this Act relating to lotteries, whoever contravenes the provisions of section 8 shall, on conviction, be punishable with imprisonment for a term which may extend to three months or with fine or with both."

ಈ ಕಾನೂನಿನ ಪ್ರಕಾರ ಲೈಸೆನ್‌ಸನ್ನು ತೆಗೆದುಕೊಳ್ಳಬೇಕು ಎಂದು ಹೇಳಿದ ಹಾಗೆ ಆಗುತ್ತದೆ. ಮತ್ತು ಲೈಸನ್ಸ್ ತೆಗೆದುಕೊಂಡು ಏನಾದರೂ ಪ್ರೈಸ್ ಕಾಂಪಿಟಿಷನ್ ಮಾಡಿದರೆ ಅವರಿಗೆ ಇವತ್ತಿನ ದಿವಸ ಶಿಕ್ಷೆ ಕೊಡಬೇಕಾಗಿಲ್ಲ ಎಂದು ಅರ್ಥವಾಗುತ್ತದೆ. ಆದರೆ ಸೆಂಟ್ರಲ್ ಗೌರ್ನಮೆಂಟಿನಲ್ಲಿ ಕೆಲವು ಪ್ರಾವಿಷನ್ಸ್ ಇವೆ. ಅವುಗಳ ಪ್ರಕಾರ ಶಿಕ್ಷೆ ಮಾಡಲು ಹಕ್ಕು ಇದೆ ಮತ್ತು ಲೈಸನ್ಸ್ ಕೊಡುವು ದಕ್ಕೂ ಹಕ್ಕು ಇದೆ ಎಂದು ಹೇಳುತ್ತಾರೆ.

ಶ್ರೀ ಟಿ. ಮರಿಯಪ್ಪ.—ಸೆಂಟ್ರಲ್ ಆಕ್ಟ್ ಈಗ ಫೋರ್ಸಿನಲ್ಲಿದೆ.

ಶ್ರೀ ಯು. ಎಂ. ಮಾದಪ್ಪ.—ಸೆಂಟ್ರಲ್ ಆಕ್ಟ್ ಫೋರ್ಸಿನಲ್ಲಿ ಇದೆ ಎಂಬುದು ನನಗೂ ಗೊತ್ತು. ಈ ಮಾನ್ಯ ಸಭೆಯವರು ಸೆಂಟ್ರಲ್ ಆಕ್ಟ್‌ನ ಪ್ರಕಾರ ಸರ್ಕಾರಕ್ಕೆ ಅಧಿಕಾರವಿದೆ ಎಂದು ಒಪ್ಪಿಕೊಳ್ಳುವುದಾದರೆ ಸೆಂಟ್ರಲ್ ಆಕ್ಟಿನಲ್ಲಿ ಲೈಸನ್ಸ್ ಕೊಡತಕ್ಕ ಅಧಿಕಾರವನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ ಮತ್ತು ಯಾವ ರೀತಿ ಕೊಡಬೇಕು ಮತ್ತು ಯಾರು ಯಾರು ಕೊಡಬೇಕು ಎನ್ನುವ ಬಗ್ಗೆ ಡೆಲಿಗೇಟೆಡ್ ಪವರ್ ಸಹ ಕೊಡಲಾಗಿದೆ. ನಮ್ಮ ಆಕ್ಟಿನಲ್ಲಿಯೂ ಹೀಗೆಯೇ ಇದೆ. ಸೆಂಟ್ರಲ್ ಆಕ್ಟಗೂ ನಮ್ಮ ಆಕ್ಟಿಗೂ ಏನೂ ರಿಪಗ್‌ನೆನ್ಸ್ ಕಾಣುತ್ತಾ ಇಲ್ಲ. ಅದನ್ನು ಡಿಲೀಟ್ ಮಾಡುವ ಅವಶ್ಯಕತೆ ಕಾಣುವುದಿಲ್ಲ ಎಂದು ಹೇಳುತ್ತೇನೆ.

ಶ್ರೀ ಟಿ. ಮರಿಯಪ್ಪ.—ಸಿವಿಲರ್ ಪ್ರಾವಿಷನ್ ಸೆಂಟ್ರಲ್ ಆಕ್ಟಿನಲ್ಲಿ ಇರುವುದರಿಂದ this becomes obsolete. Central ಆಕ್ಟಿನ Section 7-8 ಓದಿ.

ಶ್ರೀ ಯುಂ. ಎಂ. ಮಾದಪ್ಪ.—ಸೆಕ್ಷನ್ 7ರಲ್ಲಿ ಹೀಗಿದೆ:

> "7. Promoters of prize competitions to keep accounts and submit

the same to the licensing authority.—Every person who promotes or conducts a prize competition in accordance with the provisions of this Act and the rules made thereunder shall keep accounts relating to such competition and submit to the licensing authority a statement of accounts in such form and at such intervals as may be prescribed."

ಸೆಕ್ಷನ್ 8ರಲ್ಲಿ ಹೀಗಿದೆ:

"8. (1) Power to cancel or suspend licence.—The licensing authority may, after giving the holder of any licence under this Act a reasonable opportunity of being heard, cancel or suspend the licence on any one or more of the following grounds. . . ."

ಇದರಲ್ಲಿ (*a*), (*b*) ಇವೆ. ಆಮೇಲೆ ಸಬ್‌ಸೆಕ್ಷನ್ (2) ಬೇರೆ ಇದೆ. ಆದರೆ ಲೈಸನ್ಸ್ ಕೊಡತಕ್ಕವರು ಯಾರು ಎಂಬುದನ್ನು ಇಲ್ಲಿ ಹೇಳಲಿಲ್ಲ. ಈ ಆಕ್ಟ್ ಇದ್ದರೆ ಲೈಸನ್ಸ್ ಕೊಡತಕ್ಕ ಅಧಿಕಾರ ಈ ಸರ್ಕಾರಕ್ಕೆ ಉಳಿದುಕೊಳ್ಳುತ್ತದೆ. ಲೈಸನ್ಸ್ ಇಲ್ಲದೆ ನಡೆಸಿದರೆ ಅದು unlawful ಆಗುತ್ತದೆ. ಆಗ ಶಿಕ್ಷೆ ಮಾಡಲೇ ಬೇಕಾಗುತ್ತದೆ. ಸೆಕ್ಷನ್ ಎಂಟನ್ನು ತೆಗೆದು ಹಾಕಿದರೆ ಆಗ unlawful ಆಗುವುದಿಲ್ಲ.

ಶ್ರೀ ಟಿ. ಮರಿಯಪ್ಪ —ತಾವು ಈ ವಿಷಯದಲ್ಲಿ ಸ್ವಲ್ಪ ಸಂಶಯಾಸ್ಪದವಾದ ವಿಚಾರಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಮಾತನಾಡುತ್ತಿದ್ದೀರಿ. ಹಾಲಿ ಆಕ್ಟ್ ಪ್ರಕಾರ ಸಂಸ್ಥಾನಕ್ಕೆ ಪ್ರೈಜ್ ಕಾಂಪಿಟಿಷನ್ ಲಾಟರಿಗಳ ಮೇಲೆ ಸಂಪೂರ್ಣ ಅಧಿಕಾರವಿದೆ. ಯಾವಾಗ ಸೆಂಟ್ರಲ್ ಆಕ್ಟ್ ಜಾರಿಗೆ ಬಂತೋ ಅಂದಿನಿಂದ ಟ್ಯಾಕ್ಸೇಷನ್ ವಿನಾ ಬಾಕಿ ಎಲ್ಲ ವಿಚಾರಗಳಲ್ಲೂ ಕೇಂದ್ರದ ಆಕ್ಟ್ ಜಾರಿಯಲ್ಲಿದೆ. ಆದ್ದರಿಂದ ನಮ್ಮ ಆಕ್ಟ್ ಇರುವುದಕ್ಕೆ ಆಗುವುದಿಲ್ಲ. ನಾವು ಮೊದಲನೆಯ ಅವಕಾಶ ತೆಗೆದುಕೊಂಡು ನಮ್ಮ ಪ್ರಾವಿಷನನ್ನು ಡಿಲೀಟ್ ಮಾಡಲೇ ಬೇಕು. ಆದನ್ನು ಮಾಡಿಬಿಟ್ಟು ಟ್ಯಾಕ್ಸೇಷನ್ ಪವರ್ಸ್ ಮಾತ್ರ ಉಳಿಸಿಕೊಂಡಿದ್ದೇವೆ. ಆದ್ದರಿಂದ ಫಸ್ಟ್ ಏಪ್ರಿಲ್ 1956ರಿಂದ ಯಾರಾದರೂ ಪ್ರೈಜ್ ಕಾಂಪಿಟಿಷನ್ ನಡೆಸಿದರೆ ಅವರಿಗೆ ಟ್ಯಾಕ್ಸೇಷನ್ ಹಾಕುವ ಪವರ್‌ಗೋಸ್ಕರ ಇದನ್ನು ತಂದಿದ್ದೇವೆ. The Hon'ble Member is reading between the lines, it is evident. ಎಂಟು ಒಂಬತ್ತು ಸೆಕ್ಷನ್ನುಗಳನ್ನು ಬಿಟ್ಟಿರುವುದರಿಂದ ಯಾರಿಗೂ ಶಿಕ್ಷೆ ಆಗುವುದು ತಪ್ಪಿಹೋಗುತ್ತದೆ ಎಂದು ಇಟ್ಟುಕೊಳ್ಳಬೇಕಾಗಿಲ್ಲ. ಸುಪ್ರೀಮ್ ಕೋರ್ಟ್ ನೋಟೀಸಿಗೆ ಹೋಗಿ ಸ್ಟೇ ಆರ್ಡರ್ ಆಗಿ, Central Act was kept in abeyance. Finally it was quashed. Therefore this amendment becomes necessary.

ಶ್ರೀ ಯು. ಎಂ. ಮಾದಪ್ಪ.—ಹಿಂದೆ ಇದರ ವಿಚಾರ ಬಿಲ್ಲು ನಿರ್ಣಯ ಬಂದಾಗ, ಇದನ್ನೆಲ್ಲಾ ಚರ್ಚೆ ಮಾಡಲಾಯಿತು. ಸ್ವಾಮಿ, ಇದನ್ನು ಹಿಂದೆಯೂ ಸಹ ಚರ್ಚೆ ಮಾಡಲಾಗಿದೆ. ಇದರ ಮೇಲೆ ನಿರ್ಣಯ ಬಂದಾಗ ವಿಪುಲವಾದ ಚರ್ಚೆ ನಡೆಯಿತು. ಆಗಲೂ ಸಹ ಟ್ಯಾಕ್ಸ್ ಹಾಕತಕ್ಕ ಅಧಿಕಾರ ನಮ್ಮ ಸರ್ಕಾರದವರಿಗಿದೆ, punishment ಮುಂತಾದ ವಿಚಾರಗಳಿಗೆಲ್ಲಾ ಕೇಂದ್ರದ ಆಕ್ಟಿನಂತೆ ಮಾಡಬೇಕು ಎಂದು ಹೇಳಲಾಯಿತು. ಆದರೂ ಅನುಮಾನ, ತಾವು ಯಾವ ರೀತಿ ಹೇಳಿದರೂ ಆ ರೀತಿ ಇದೆ.

ಶ್ರೀ ಟಿ. ಮರಿಯಪ್ಪ.—ಅದಕ್ಕಾಗಿಯೇ law ಡಿಪಾರ್ಟ್‌ಮೆಂಟಿನವರನ್ನು ಚೆನ್ನಾಗಿ consult ಮಾಡಿ ತಿದ್ದುಪಡಿ ತಂದಿದ್ದೇವೆ. ತಾವು ದಯವಿಟ್ಟು ಈ ಬಿಲ್ಲಿನ ಹಿನ್ನೆಲೆಯಾಗಿರುವ Object and Reasons ನೋಡಿ. ಅಲ್ಲಿ ಹೇಳಿದೆ:

"In order to resolve the doubts and to enable the State to levy and collect the taxes. . . . ."

ಶ್ರೀ ಯು. ಎಂ. ಮಾದಪ್ಪ.—ತಾವು ಹೇಳುವುದು ಅರ್ಥಗರ್ಭಿತವಾಗಿದೆ. ಆದರೂ ಅಷ್ಟು ನಿರ್ದಿಷ್ಟವಾಗಿ ಹೇಳಿಲ್ಲ. ಇದು *sub judice* ಅಲ್ಲವೇ, ಚರ್ಚೆ ಮಾಡುವುದಕ್ಕೆ ಅವಕಾಶವಿದೆಯೋ ಇಲ್ಲವೋ ಎಂದು ಅನುಮಾನಪಡುವುದಕ್ಕೆ ಬೇರೆ ಅವಕಾಶವಿದೆ. ನನಗೆ ಗೊತ್ತು, ಕೆಲವು ಕೇಸುಗಳು ಕೋರ್ಟಿನಲ್ಲಿ pending ನಲ್ಲಿವೆ. ಆದರೂ ಇದೇ ರೀತಿಯ ಪ್ರಶ್ನೆ ಲೋಕಸಭೆಯಲ್ಲಿ ಬಂದಾಗ, ಲೋಕಸಭಾಧ್ಯಕ್ಷರು ಇದಕ್ಕೆ ಅವಕಾಶ ಕೊಡಬಹುದೆಂದು ಅಪ್ಪಣೆ ಕೊಡಿಸಿದ್ದಾರೆ. ಆದ್ದರಿಂದ ಇದನ್ನು ಚರ್ಚೆ ಮಾಡುವುದು *sub judice* ಆಗುವುದಿಲ್ಲ. 1952 ರಿಂದ 1953ರ ವರೆಗೂ arrearsನಲ್ಲಿ ಬಿದ್ದಿರತಕ್ಕ R.M.D.C. ಯವರ ವಿಚಾರವೇ ಕೋರ್ಟಿನಲ್ಲಿರತಕ್ಕಂಥಾದ್ದು. ಇದು ಕೋರ್ಟಿನಲ್ಲಿ pendingನಲ್ಲಿದೆ ಎಂಬುದೇ ಮುಂತಾದ ವಿಷಯಗಳನ್ನು ಮಾನ್ಯ ಮಂತ್ರಿಗಳು move ಮಾಡುವಾಗಲೇ ವಿಶದವಾಗಿ ಹೇಳಿದ್ದರೆ ಚೆನ್ನಾಗಿತ್ತು. ಅದೇನು ಈ ಸಭೆಯ ದುರದೃಷ್ಟವೋ ಅಥವಾ ದೇಶದ ದುರದೃಷ್ಟವೋ ಗೊತ್ತಿಲ್ಲ, ಈ ರೀತಿ ಹೊಗುಮ್ಮಾಗಿ ಸರ್ಕಾರದವರು ಬಿಲ್ಲನ್ನು ತಂದು pass ಮಾಡಿಸಿಕೊಳ್ಳುವುದಕ್ಕೆ ಬದಲಾಗಿ ಬಹಿರಂಗವಾಗಿ ಈ ಸಭೆಯ ಹೊರಗಡೆ ಎಲ್ಲರಿಗೂ ಗೊತ್ತುಪಡಿಸುವುದು ಯುಕ್ತವಾಗಿತ್ತು. ಅಲ್ಲದೆ ನಿರ್ಣಯದ ಸಂದರ್ಭದಲ್ಲೇ ವಿಪುಲವಾಗಿ ಚರ್ಚೆ ಮಾಡಿದ್ದೇವೆ. ಈಗಲಾದರೂ ನಮಗೆ ಎಷ್ಟು ಬಾಕಿ ಇದೆ, ಎಷ್ಟು ವಸೂಲಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರಬೇಕೆಂದು ನಾನು ಇಚ್ಛೆಪಡುತ್ತೇನೆ.

ಸ್ವಾಮಿ, ಹಿಂದೆ ಇದಕ್ಕೆ ಸಂಬಂಧ ಪಟ್ಟಂತೆ ಒಂದು ನಿರ್ಣಯ ಚರ್ಚೆಯಾದಾಗ ಶ್ರೀ ಜೆ. ಮಹಮದ್ ಇಮಾಂರವರು ಈ ರೀತಿ ಪ್ರಶ್ನೆ ಕೇಳಿದ್ದಾರೆ:

"Only one clarification, Sir. You were pleased to say that in some places the matter is *sub judice*. Where is it pending? Is it in Mysore Court or in Supreme Court? Of what nature? Does it create any complication by passing this Act? Has the Government examined and what is the position? Secondly, supposing something happens in the Supreme Court, which I hope not. Then, should the Mysore

(ಶ್ರೀ ಯು. ಎಂ. ಮಾದಪ್ಪ)

Government refund all the moneys collected by them? Will it have a retrospective effect?"

ಅದರ ಮೇಲೆ ಆಗಿನ ಆಡಳಿತ ಮಂತ್ರಿಗಳಾಗಿದ್ದ ಶ್ರೀ ಸಿದ್ದವೀರಪ್ಪನವರು ಹೇಳಿದ್ದಾರೆ:

"I think Dr. Krishnaswamy raised a point of order in the Lok Sabha whether it would be right to introduce this bill when the matter is *sub judice* before the Supreme Court. The Speaker gave a ruling that even in respect of matters pending before a court the Parliament is supreme. This is the position so far you can find out in the proceedings of the Lok Sabha when the bill was debated there. So far as our court is concerned, the suit that is filed is in respect of arrears of taxes from 1st February 1952 to 12th November 1953—Rs. 12,12,000–for which R.M.D.C. has obtained stay order in the District and Civil Station court. They have been challenging our method of calculation. They have been giving one calculation and we have been taking a calculation favourable to Government. That is a point of difference which is in dispute in the court. Whatever the effect of it is, we shall consider it when the court gives a decision. . . . ."

ಹೀಗೆ ಹೇಳಿದ ಮೇಲೆ ಅದು pending ನಲ್ಲಿರುವುದೆಂಬುದು ಒಪ್ಪಿದ ಹಾಗಾಯಿತು. ಜೊತೆಗೆ collect ಆಗಿರುವುದೂ ಚೆನ್ನಾಗಿಯೇ ಆಗಿದೆ. ಲಕ್ಷಾಂತರ ರೂಪಾಯಿಗಳು ಆರ್.ಎಂ.ಡಿ.ಸಿ. ಕಲೆಕ್ಟ್ ಮಾಡಿದೆ. ಇದರಿಂದ ಏನಾಗುತ್ತದೆ ಎಂದರೆ ಸೆಂಟ್ರಲ್ ಆಕ್ಟ್ ಬಂದ ಮೇಲೆ ಜನವರಿಯಿಂದ ಮಾರ್ಚ್‌ವರೆಗೆ ಕೊಡಬೇಕಾದ ಅರಿಯರ್ಸ್ ಇವತ್ತಿನ ದಿವಸ ವಸೂಲಾಗಬೇಕಾಗಿದೆ. ಹಿಂದೆ ಇದ್ದ ನಮ್ಮ ಈ ಆಕ್ಟಿನ ವಿಷಯದಲ್ಲಿ ಸ್ವಲ್ಪ ಡೌಟ್ ಇದೆ. ಅದನ್ನು ಬಿಟ್ಟು ಸೆಂಟ್ರಲ್ ಆಕ್ಟ್ ಮಾತ್ರ ತೆಗೆದುಕೊಳ್ಳೋಣವೆಂದು ಹೇಳಿರುವುದನ್ನು ನೋಡಿದರೆ ನನಗೆ ಅನುಮಾನವಾಗುತ್ತದೆ. ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಈ ಸಭೆಗೆ ತಿಳಿಸಬೇಕೆಂದಿದ್ದೇನೆ. ಹಿಂದಿನ ಸರ್ಕಾರ ಆರ್.ಎಂ.ಡಿ.ಸಿ.ಗೆ ಲೈಸನ್ಸ್ ಕೊಟ್ಟಿದ್ದು, ಆಮೇಲೆ ಲೈಸೆನ್ಸನ್ನು ರಿನ್ಯೂ ಮಾಡದೇ ಇದ್ದುದು, ಮತ್ತು ಇತ್ತೀಚೆಗೆ ಬಂದ ಸರ್ಕಾರ ಈ ವಿಷಯದಲ್ಲಿ ಏನು ಹೇಳಿದೆಯೋ ಅದನ್ನೆಲ್ಲಾ ನೋಡಿದರೆ, ಕಾಂಗ್ರೆಸ್ ಸರ್ಕಾರವವರು ದೇಶಕ್ಕೆ ಬಾತಕ್ಕ ದುಡ್ಡನ್ನು ಸರಿಯಾಗಿ ಯಾವ ರೀತಿಯಿಂದ ಕಣ್ಣಿಟ್ಟು ತೆಗೆದು ಕೊಂಡಿದ್ದಾರೆಂಬುದು ಗೊತ್ತಾಗುತ್ತದೆ. ಆದರೆ ಸರ್ಕಾರಕ್ಕೆ "ಹಣಬೇಕು, ಡೆವಲಪ್‌ಮೆಂಟ್ ವರ್ಕ್ಸ್ ಮಾಡಬೇಕು" ಎಂದು ಹೇಳುವುದನ್ನು ನಾವು ಒಪ್ಪಿ ಕೊಳ್ಳುತ್ತೇವೆ. ಕೆಲವು ಆಕ್ಟ್‌ಗಳಿಂದ ಹಣ ಬರುವುದನ್ನು ವಸೂಲು ಮಾಡುವ ವಿಷಯದಲ್ಲಿ ಮೊದಲೇ ಎಚ್ಚರಿಕೆಯಿಂದ ವಿಚಾರ ಮಾಡಿದ್ದರೆ ಇಷ್ಟು ತೊಂದರೆಯಾಗುತ್ತಿರಲಿಲ್ಲ. ಈ ರೀತಿ ಮಸೂದೆಗಳನ್ನು ಅವಸರವಸರವಾಗಿ ತಂದು, ಇವತ್ತೇ ಪರ್ಯಾಲೋಚನೆ ಬೇಕೆಂದು ಹೇಳಿ ತಿದ್ದುಪಡಿಗೆ ಅವಕಾಶವಿಲ್ಲದ ಹಾಗೆ ಮಾಡಿದರೆ, ಆಗ ನಮಗೆ ಬಹಳ ಕಷ್ಟವಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಈ ಆಕ್ಟ್‌ಗಳನ್ನು ಸಭೆಯ ಮುಂದೆ ತರುವಾಗ ಬಹಳ ಟೈಂ ಕೊಟ್ಟು ಚರ್ಚೆ ಮಾಡುವುದು ಉತ್ತಮ. ಇಷ್ಟು ಅವಸರವಸರವಾಗಿ ತಂದರೆ ಹೇಗೆ ಮಸೂದೆಯನ್ನು ಪಾಸ್ ಮಾಡುವುದಕ್ಕೆ ಸಾಧ್ಯ? ನಮಾರು 1952ನೆಯ ಇಸವಿಯಿಂದ ಇಲ್ಲಿಯವರೆಗೂ ಒಂದು ಆಕ್ಟಿಗೆ ಎಷ್ಟೆಷ್ಟೋ ಸಾರಿ ಅಮೆಂಡ್‌ಮೆಂಟ್ ಆಗಿದೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ನೀವು ಅಮೆಂಡ್‌ಮೆಂಟನ್ನು ತರುವಾಗ ಅದರಲ್ಲಿ ಲೀಗಲ್ ಡಿಫಿಕಲ್ಟಿ ಏನಿದೆಯೆಂದು ಯೋಚನೆ ಮಾಡಿ ತಳುಹಿಸಿ. ಕಾರ್ಸ್ಟಿಟ್ಯೂಷನ್ ಪ್ರಕಾರ ಅಡ್ವೋಕೇಟ್ ಜನರಲ್ ಈ ಸಭೆಗೆ ಬರಲು ಅವಕಾಶವಿದೆ. ಆದರೂ ಅವರು ಬರುವುದಿಲ್ಲ. ಅವರು ಬರುವುದು ಬಹಳ ಅತ್ಯಾವಶ್ಯಕ.

ಅಧ್ಯಕ್ಷರು.—ಇಂಡಿಯನ್ ಕಾರ್ಸ್ಟಿಟ್ಯೂಷನ್ ಪ್ರಕಾರ ಅದಕ್ಕೆ ಅವಕಾಶವಿದೆಯೆಂದು ಕಾಣುತ್ತದೆ.

ಶ್ರೀ ಯು. ಎಂ. ಮಾದಪ್ಪ.—ಆ ರೀತಿ ಮಾಡುವುದು ಒಳ್ಳೆಯದೆಂದು ನನಗನ್ನಿಸುತ್ತದೆ.

Mr. SPEAKER.—The House will now rise and meet to-morrow at 8-30 A.M.

---

*The House adjourned at Six of the Clock to meet again at Thirty Minutes past Eight of the Clock on Saturday, the 28th September 1957.*

---